ಇ) ಮಂಜೂರಾಗಿ ಪೂರೈಸಲಾದ ಕಾಮಗಾರಿಗಳು—೫೬. ಮಂಜೂರಾಗಿ ಪೂರೈಸದೆ ಉಳಿದಿರುವ ಕಾಮಗಾರಿಗಳು—೧೮೮. ಈ ಬಗ್ಗೆ ಅಗತ್ಯ ಹಣ ಒದಗಿಸಿಲ್ಲ. ಉಳಿದ ಎಲ್ಲಾ ಕಾಮಗಾರಿಗಳನ್ನು ಸಾಕಷ್ಟು ಹಣವನ್ನು ಒದಗಿಸಿದ ಕೂಡಲೇ ಕಾರ್ಯಗತ ಮಾಡಿ ತ್ವರಿತವಾಗಿ ಪೂರೈಸಲಾಗುವುದು.

ಈ) ಮಂಜೂರಾಗದೆ ಇನ್ನೂ ಕೆಲಸಗಳು ಉಳಿದಿರುವುದರಿಂದ ಈ ಕೆಲಸಗಳನ್ನು ಪೂರೈಸಲು ಹಾಗೂ ಮಂಜೂರಾಗಿ ಅಪೂರ್ಣವಾಗಿರುವ ಕೆಲಸಗಳನ್ನು ಮುಗಿಸಲು ಈಗಿನ ದರದಲ್ಲಿ ಕ್ರಮವಾಗಿ ಸುಮಾರು ೫೫ ಮತ್ತು ೭೩ ಲಕ್ಷ ರೂಪಾಯಿಗಳು ಬೇಕಾಗುತ್ತದೆ.

ಶರಾವತಿ ಹಿನ್ನೀರಿನ ರಸ್ತೆ ದುರಸ್ತಿ ಬಗ್ಗೆ

೩೮ (೨೫೫೫) ಶ್ರೀ ಎಲ್.ಟಿ. ತಿಮ್ಮಪ್ಪ ಹೆಗ್ಗಡೆ (ಸಾಗರ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಸಾಗರ ತಾಲ್ಲೂಕು ಕರೂರು ಹೋಬಳಿ ಶರಾವತಿ ಯೋಜನೆಯ ಹಿನ್ನೀರಿನಿಂದ ಆವೃತವಾಗಿ ದ್ವೀಪವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಈ ಭಾಗಕ್ಕೆ ಹೊರಜಗತ್ತಿನಿಂದ ಸಂಪರ್ಕ ವ್ಯವಸ್ಥೆ ಸರಿಯಾಗಿ ಕಲ್ಪಿಸಲು ಸರ್ಕಾರದವರು ಕೈಗೊಂಡ ಕ್ರಮವೇನು ?

ಇ) ಈ ಶರಾವತಿ ಪುನರ್‌ವಸತಿ ಜನರಿಗಾಗಿ ಮಾಡಿದ ರಸ್ತೆಯು ವಿಸ್ತೀರ್ಣವೆಷ್ಟು ?

ಈ) ಈ ಸದರಿ ರಸ್ತೆಗಳು ಈಗ ಉಪಯೋಗ ಸ್ಥಿತಿಯಲ್ಲಿ ಇಲ್ಲದಿರುವ ಬಗ್ಗೆ ಸರ್ಕಾರಕ್ಕೆ ವರದಿಯಾಗಿದೆಯೇ ? ಇಂತಹ ರಸ್ತೆಗಳನ್ನು ಸರ್ಕಾರವೇ ವಹಿಸಿಕೊಂಡು ಆದ್ಯತೆಯ ಮೇಲೆ ಅಭಿವೃದ್ಧಿಪಡಿಸುವರೇ ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಹಾಗೂ ನೀರಾವರಿ ಸಚಿವರು).—

ಅ) ಹೌದು.

ಆ) ಈ ಭಾಗಕ್ಕೆ (ಕಾರೂರು ಹೋಬಳಿ) ಸಾಗರದಿಂದ ಹೋಗಲು ಸಮೀಪ ರಸ್ತೆ ಸಂಪರ್ಕವಿಲ್ಲವಾದ್ದರಿಂದ ಹೊಳೆ ಬಾಗಿಲಿನಿಂದ ಕಳಸವಳ್ಳಿಗೆ ನೀರಿನ ಮೂಲಕ ಹೋಗಲು ಪೋರ್ಟ್ ಇಲಾಖೆಯವರಿಂದ ಮೋಟಾರು ಲಾಂಚ್ ವ್ಯವಸ್ಥೆ ಇರುತ್ತದೆ ಮತ್ತು ಸಾಗರದಿಂದ ಕಾರ್ಗಲ್, ಕೋಗಾರ್ ಮೂಲಕ ಹೋಗಲು ಖಾಯಂ ರಸ್ತೆ ಸಾರಿಗೆ ಸಂಪರ್ಕ ವ್ಯವಸ್ಥೆ ಇದೆ. ಹಾಗೂ ಹೊಸನಗರ ತಾಲ್ಲೂಕಿನಿಂದಲೂ ಲೋಕೋಪಯೋಗಿ ಇಲಾಖೆಯ ರಸ್ತೆ ಸಂಪರ್ಕವಿದೆ.

ಇ) ೧೩೩.೦೦ ಕಿಲೋಮೀಟರ್.

ಈ) ವರದಿ ಬಂದಿದೆ ಹಾಗೂ ಅತಿ ಮುಖ್ಯವಾದ ೬ ರಸ್ತೆಗಳನ್ನು ಲೋಕೋಪಯೋಗಿ ಇಲಾಖೆ ವಹಿಸಿಕೊಳ್ಳಲಾಗಿದೆ. ಇನ್ನುಳಿದ ೨೮ ರಸ್ತೆಗಳನ್ನು ಆರ್ಥಿಕ ಪರಿಸ್ಥಿತಿಯನ್ನು ಮತ್ತು ಪ್ರಾಮುಖ್ಯತೆಯನ್ನು ಅವಲಂಬಿಸಿ ಹಂತ ಹಂತವಾಗಿ ತೆಗೆದುಕೊಳ್ಳುವುದನ್ನು ಪರಿಗಣಿಸಲಾಗುವುದು.

ಅಧ್ಯಕ್ಷರು: ಪ್ರಶ್ನೋತ್ತರಗಳ ಪಟ್ಟಿಯಂನ್ನು ಮುಂದಿಸಲಾಗಿದೆ. ಈಗ ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೇ, ೧೯೮೨ನೇ ಇಸವಿಯ ಚಿಟ್ ಫಂಡ್ಸ್ ಶಾಸನದ ೪೯ನೇ ಕಲಮಿನ ಮೇರೆಗೆ ೧೯೮೩ನೇ ಇಸವಿಯ ಚಿಟ್‌ಫಂಡ್ಸ್ (ಕರ್ನಾಟಕ) ನಿಯಮಗಳಿಗೆ ಸಂಬಂಧಿಸಿದಂತೆ ದಿನಾಂಕ ೨-೧-೧೯೮೪ರಂದು ಹೊರಡಿಸಲಾದ ಆರ್.ಡಿ.ಸಿ. ೫೬ ಸಿ.ಎಂ.ಎಲ್. ೮೩ನೇ ಅಧಿಸೂಚನೆ ಹಾಗೂ ೧೯೫೯ನೇ ಇಸವಿಯ ಕರ್ನಾಟಕ ಸಹಕಾರ ಸಂಘಗಳ ಶಾಸನದ ೧೩೦ನೇ ಕಲಮಿನ ಮೇರೆಗೆ ೧೯೫೯ನೇ ಇಸವಿಯ ಕರ್ನಾಟಕ ಸಹಕಾರ ಸಂಘಗಳ

ಶಾಸನದ ೨೩ನೇ ಕಲಮಿಗೆ ಹೆಚ್ಚಿನ ಅವಕಾಶ ಕಲ್ಪಿಸುವಂತೆ ದಿನಾಂಕ ೬-೧೦-೧೯೮೪ ರಂದು ಹೊರಡಿಸಲಾದ ಆರ್.ಡಿ.ಸಿ.ಳಿ.ಸಿ.ಎಲ್.ಎಂ. ೮೪ (೧೧)ನೇ ಅಧಿಸೂಚನೆಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ಸಭೆಯ ಮುಂದೆ ಕಾಗದ ಪತ್ರಗಳನ್ನು ಮಂಡಿಸಲಾಗಿದೆ. ಈಗ ಮಾನ್ಯ ಬಣಕಾರ್ ಅವರು ವರದಿಯನ್ನು ಒಪ್ಪಿಸುವುದು.

ವರದಿಗಳ ಮಂಡನೆ

ಶ್ರೀ ಬಿ. ಜಿ. ಬಣಕಾರ್.—ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಕೆಲವು ಕಾರ್ಯ ವಿಧಾನಗಳ ಬಗ್ಗೆ ಹಾಗೂ ೧೯೭೨-೭೩ ರಿಂದ ೧೯೭೭-೭೮ನೇ ಸಾಲಿನ ವರೆಗಿನ ನಿಯಂತ್ರಕ ಮಹಾ ಲೇಖಾ ಪರೀಕ್ಷರ ವರದಿಯಲ್ಲಿ ಒಳಗೊಂಡಿರುವ ಪರಿಚ್ಛೇದಗಳ ಬಗ್ಗೆ ಸಾರ್ವಜನಿಕ ಉದ್ದಿಮೆಗಳ ಸಮಿತಿಯ ೧೮ನೇ ವರದಿಯನ್ನು ಈ ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ವರದಿಯನ್ನು ಸಭೆಯ ಮುಂದೆ ಮಂಡಿಸಲಾಗಿದೆ.

ಮನವಿಗಳು

ಶ್ರೀ ಎಲ್. ಟಿ. ತಿಮ್ಮಪ್ಪಹೆಗಡೆ.—ನನ್ನ ಪ್ರಶ್ನೆ ಯಾವಾಗಲೂ ಕೊನೆಯಲ್ಲಿರುತ್ತದೆ. ಇದರಿಂದ ದಿನವೂ ನನ್ನ ಪ್ರಶ್ನೆಗಳು ಲ್ಯಾಪ್ಸ್ ಆಗುತ್ತಿವೆ. ಇನ್ನು ಮುಂದೆ ನನ್ನ ಪ್ರಶ್ನೆ ಮೊದಲು ಬರಲು ಏನಾದರೂ ತಾವು ವ್ಯವಸ್ಥೆ ಮಾಡಬೇಕು. ತಾವು ನಮಗೆ ರಕ್ಷಣೆ ಕೊಡಬೇಕು.

ಅಧ್ಯಕ್ಷರು.—ಈ ಬಗ್ಗೆ ನಾನು ಸಹ ನಿಮ್ಮ ಜೊತೆಯಲ್ಲಿ ಸಹಭಾಗಿಯಾಗಿದ್ದೇನೆ. ಈ ಬಗ್ಗೆ ಏನು ಮಾಡಬೇಕೆಂಬುದನ್ನು ಈ ಸಭೆಯೇ ನಿರ್ಧಾರ ಮಾಡಬೇಕು.

ಶ್ರೀ ಪಂಪಾಪತಿ.—ಪ್ರಶ್ನೋತ್ತರ ಕಾಲವನ್ನು ಒಂದೂವರೆ ಗಂಟೆಗೆ ಹೆಚ್ಚು ಮಾಡುವುದು ಒಳ್ಳೆಯದು.

ಅಧ್ಯಕ್ಷರು.—ತಾವು ಸಲಹೆ ಮಾಡಿ. ಅದನ್ನು ಆಲೋಚನೆ ಮಾಡೋಣ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸಮಯ ವಿಸ್ತರಣೆ ಮಾಡುವುದು ಪ್ರತ್ಯೇಕ ಪ್ರಶ್ನೆ. ಆದರೆ ಇರುವ ಸಮಯದಲ್ಲಿ ಎಲ್ಲ ಪ್ರಶ್ನೆಗಳನ್ನೂ ಸಹ ತೆಗೆದುಕೊಳ್ಳಲು ತಾವು ವ್ಯವಸ್ಥೆ ಮಾಡಬೇಕು.

ಅಧ್ಯಕ್ಷರು.—ಈಗ ೧೫ ಪ್ರಶ್ನೆಗಳಿಗೆ ಉತ್ತರ ಕೊಟ್ಟಿದ್ದಾರೆ.

ಶ್ರೀ ಎಂ. ವೀರಪ್ಪಮೊಯಿಲಿ.—ತಾವು ಅ ಪ್ರಾ ಮು ಖ್ಯ ವಾ ದ ಪ್ರಶ್ನೆಗಳಿಗೆ ಕಡಿಮೆ ಪ್ರಾಮುಖ್ಯತೆ ಕೊಟ್ಟು ಪ್ರಾಮುಖ್ಯವಾದ ಹಾಗೂ ಜಿಲ್ಲೆಗಳಿಗೆ ಸಂಬಂಧಪಟ್ಟಂತೆ ಪ್ರಶ್ನೆಗಳು ಬಂದಾಗ ಹೆಚ್ಚಿನ ಸದಸ್ಯರಿಗೆ ಉಪ ಪ್ರಶ್ನೆ ಕೇಳಲು ಅವಕಾಶ ಕೊಟ್ಟರೆ ಆಯಾ ದಿನದ ಎಲ್ಲ ಪ್ರಶ್ನೆಗಳನ್ನು ತೆಗೆದುಕೊಳ್ಳಲು ಸಾಧ್ಯವಾಗುತ್ತದೆ ಮತ್ತು ಈ ಸಮಸ್ಯೆಯನ್ನು ಸಹ ಬಗೆಹರಿಸಬಹುದು.

ಅಧ್ಯಕ್ಷರು.—ಇದನ್ನು ನಾನು ಈ ಸಭೆಯ ತೀರ್ಮಾನಕ್ಕೇ ಬಿಡುತ್ತೇನೆ. ಸಭಾನಾಯಕರು ಮತ್ತು ವಿರೋಧಪಕ್ಷದ ನಾಯಕರು ಸೇರಿಕೊಂಡು ಒಂದು ತೀರ್ಮಾನಕ್ಕೆ ಬರುವುದು ಒಳ್ಳೆಯದು.

ಶ್ರೀ ಎಂ. ವೀರಪ್ಪಮೊಯ್ಲಿ.—ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದನ್ನು ನಾವು ನಿಮಗೇ ಬಿಡುತ್ತೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇದಕ್ಕೆ ಎಲ್ಲರೂ ಸಹಾಯ ಮತ್ತು ಸಹಕಾರ ನೀಡಬೇಕಾಗುತ್ತದೆ.

ಅಧ್ಯಕ್ಷರು.—ಈಗ ಮಾನ್ಯ ವೀರಪ್ಪಮೊಯಿಲಿ ಅವರು ೩೩ನೇ ನಿಯಮದ ಪ್ರಕಾರ ಕೊಟ್ಟಿರುವ ನೋಟೀಸ್ ಬಗ್ಗೆ ಪ್ರಸ್ತಾಪ ಮಾಡಬಹುದು.